

## ಭಿನ್ನತೆಯ ಅಡಿಕೆ ಸರ

ಆಭರಣದಲ್ಲಿ ಹೊಸತಾಗಿ ಆವಿಷ್ಕಾರಗೊಂಡ ಆಭರಣವೆಂದರೆ 'ಅಡಿಕೆ ಸರ' ಸ್ವಾದಿಷ್ಟವಾದ ಅಡಿಕೆಯನ್ನು ಆಭರಣವನ್ನಾಗಿ ಧರಿಸಬಹುದೇ ಎಂದು ಮೂಗಿನ ಮೇಲೆ ಬೆರಳಿಟ್ಟು ನೋಡುವಂತಹ ಸುಂದರ ಹಾಗೂ ಫ್ಯಾಷನ್ ಪ್ರಿಯರಿಗಾಗಿ ಮಾಡಿದ ಸರವಾಗಿದೆ. ಶಿವನಿಗೆ ರುದ್ರಾಕ್ಷಿ ಸರ ಪ್ರಿಯವಾದರೆ, ಸನ್ಮಾನ, ಬಹುಮಾನ ಕೊಡುವಾಗ ಹಾಕಲು ಯೋಗ್ಯವಾದ ಸರ ಇದಾಗಿದೆ. ಚಿನ್ನ ಮತ್ತು ಬೆಳ್ಳಿಯಲ್ಲಿ ನೈದ ವಿನ್ಯಾಸದಲ್ಲಿರುವ ಇದು ಫ್ಲೆಕ್ಸಿಬಲ್ ಸಹ ಆಗಿದೆ. ಪುರುಷರಿಗೆ ದಕ್ಷಿಣ ಕನ್ನಡದ ಅಡಿಕೆಯಿಂದ ಸರ ತಯಾರಿಸಿದರೆ, ಹೆಂಗಳೆಯರಿಗೆ ಸಿಂಗಾಪುರ ಅಡಿಕೆಯಿಂದ ಸರ ತಯಾರು ಮಾಡಲಾಗಿದೆ. ಅಡಿಕೆ ಹಾರವನ್ನು ಪ್ರಪ್ರಥಮವಾಗಿ ತಯಾರಿಸಿದ ಹೆಗ್ಗಳಿಕೆ ಮುಳಿಯ ಸಂಸ್ಥೆಗೆ ಸಲ್ಲುತ್ತದೆ. ಚಿನ್ನದ ಸಿಂಗಾಪುರ ಅಡಿಕೆ ಸರದ ಬೆಲೆಯು ₹86,680 ಆದರೆ, ಬೆಳ್ಳಿಯ ಸಿಂಗಾಪುರ ಅಡಿಕೆ ಸರದ ಬೆಲೆಯು ₹2,270 ಬೆಳ್ಳಿಯ ದಕ್ಷಿಣ ಕನ್ನಡ ಅಡಿಕೆ ಸರದ ಬೆಲೆಯು ₹4,330 ಇದೆ.

—ಕೃಷ್ಣವೇಣಿ ಪ್ರಸಾದ್ ಮುಳಿಯ, ಪುತ್ತೂರು



## ಕೈ ಬೆರಳಲ್ಲ ಮೂಲಂಗಿ

ಚಿತ್ರ ನೋಡಿದ ತಕ್ಷಣ ನೋಡುಗರಿಗೆ ಕತ್ತರಿಸಿದ ಹಸ್ತದಂತೆ ಹಾಗೂ ಮನುಷ್ಯನ ಎಡಗೈ ಬೆರಳುಗಳಂತೆ ಕಾಣುತ್ತದೆ. ಅದು ಖಂಡಿತ ಅಲ್ಲ. ತರಕಾರಿ ತರಲು ಅಂಗಡಿಗೆ ಹೋಗಿದ್ದಾಗ ನನಗೆ ವಿಚಿತ್ರ ರೀತಿಯ ಮೂಲಂಗಿ ಗಮನ ಸೆಳೆಯಿತು. ಪ್ರಕೃತಿಯಲ್ಲಿ ಹಲವಾರು ವಿವಿಧ ರೂಪದ ವಿಚಿತ್ರ ರೂಪದ ತರಕಾರಿಗಳನ್ನು ನೋಡಿದ್ದೇವೆ. ಅದೇ ರೀತಿ ನಾಲ್ಕು ಬೆರಳಿನಾಕೃತಿಯ ಹಸ್ತರೂಪದ ಈ ಮೂಲಂಗಿ ಸೃಷ್ಟಿಯ ವಿಚಿತ್ರಗಳಲ್ಲೊಂದು.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

## ಇದು ಹಳೆಕಾಲದ ಕೊಣಗೆ

ಈ ಚಿತ್ರದಲ್ಲಿ ಕಾಣುತ್ತಿರುವುದು 'ಕೊಣಗೆ'. ಅಪ್ಪಟ ರೊಟ್ಟಿ ಸೀಮೆಯವರಿಗೆ ಇದು ಸಾಮಾನ್ಯವಾಗಿ ಚಿರಪರಿಚಿತ. ರೊಟ್ಟಿಯ ಹಿಟ್ಟನ್ನು ತುಂಬಾ ಸುಲಭವಾಗಿ ಇದರಲ್ಲಿ ನಾದಿ, ಇದರ ಮೇಲೆನೇ ತಟ್ಟಲಾಗುತ್ತದೆ. ಈಗಿನ ತರ ಪ್ರತ್ಯೇಕವಾಗಿ ಮಣೆ, ಲಟ್ಟಣಿಗೆಗಿಂತ ಭಿನ್ನವಾದದ್ದು. ಬೇರೆ ಬೇರೆ ತರದ ಹಿಟ್ಟನ್ನು ನಾದಲು ಹಾಗೂ ಹಪ್ಪಳ ಹಿಟ್ಟನ್ನು ನಾದುವುದಕ್ಕೆ ಇದು ಸಹಕಾರಿ. ಆದರೆ, ಇದರ ಜಾಗದಲ್ಲಿ ಈಗ ಬಗೆ ಬಗೆಯ ರೊಟ್ಟಿ ಮೇಕರ್ ಯಂತ್ರಗಳು ಬಂದು ಕೂತಿವೆ. ಹಳ್ಳಿಗಾಡುಗಳಲ್ಲಿಯೂ ಈ ಯಂತ್ರಗಳದ್ದೇ ಪಾರುಪತ್ಯ. ಆದರೆ, ಈ ಕೊಣಗೆ ಅಜ್ಜಿಯ ಮನೆಯಿಂದ ಅಮ್ಮನ ಮನೆಗೆ, ಈಗ ನನ್ನ ಮನೆಗೆ ತಂದು ಉಪಯೋಗಿಸುತ್ತಿದ್ದೇನೆ.

—ಆರ್. ಸುಮ ಸಪ್ತಗಿರಿ, ತರೀಕೆರೆ

